/674589/2024

ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: DTE-ADMI0EST(10)/2/2024/1956

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 12-09-2024

## ಹಿಂಬರಹ

ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 25 ಡಿಟಿಇ 2024 ದಿನಾಂಕ: 12-03-2024 ರ ಅನುಬಂಧದಲ್ಲಿನ ವಿಜ್ಞಾನ ಮತ್ತು ಮಾನವಶಾಸ್ತ್ರ ವಿಭಾಗದಲ್ಲಿನ ಕ್ರಮ ಸಂಖ್ಯೆ:14 ಮತ್ತು 20 ಹಾಗೂ ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗದಲ್ಲಿನ ಕ್ರಮ ಸಂಖ್ಯೆ:23 ರಿಂದ 29 ರಲ್ಲಿ ನಮೂದಿಸಲಾದ/ಹೆಸರಿಸಲಾದ ಉಪನ್ಯಾಸಕರುಗಳನ್ನು ಹೊರತುಪಡಿಸಿ, ಆದೇಶದಲ್ಲಿನ ಇನ್ನುಳಿದ ಉಪನ್ಯಾಸಕರುಗಳ ಮಾಹಿತಿಗಾಗಿ ಹಾಗೂ ಸಂಬಂಧಪಟ್ಟ ಪ್ರಾಂಶುಪಾಲರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ಮುಂದುವರೆದು, ಮೇಲೆ ತಿಳಿಸಿರುವ ಕ್ರಮ ಸಂಖ್ಯೆಗಳ ಉಪನ್ಯಾಸಕರುಗಳ ವೃತ್ತಿ ಪದೋನ್ನತಿಗೆ ಸಂಬಂಧಿಸಿದಂತೆ, ವಿದ್ಯಾರ್ಹತೆಯ (ಪಿ.ಹೆಚ್.ಡಿ) ಬಗ್ಗೆ ಎ ಐ ಸಿ ಟಿ ಇ ಸ್ಪಷ್ಟೀಕರಣ ಬಂದ ನಂತರ ಕ್ರಮ ವಹಿಸಲಾಗುವುದು.

Signed by
Prasanna H
Date: 18.09.2024 17:03:55
ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ,

ಇವರಿಗೆ:-

1. ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ - ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಸಂಬಂಧಪಟ್ಟ ಉಪನ್ಯಾಸಕರುಗಳಿಗೆ (ಅನುಬಂಧದಲ್ಲಿನ ವಿಜ್ಞಾನ ಮತ್ತು ಮಾನವಶಾಸ್ತ್ರ ವಿಭಾಗದಲ್ಲಿನ ಕ್ರಮ ಸಂಖ್ಯೆ:14, 20 ಹಾಗೂ ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗದಲ್ಲಿನ ಕ್ರಮ ಸಂಖ್ಯೆ:23 ರಿಂದ 29 ರಲ್ಲಿ ಹೆಸರಿಸಲಾದ ಉಪನ್ಯಾಸಕರುಗಳನ್ನು ಹೊರತುಪಡಿಸಿ) ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ. (ಪ್ರಾಂಶುಪಾಲರ ಮುಖಾಂತರ)

ಪ್ರತಿ:-

1. ಮಹಾಲೇಖಪಾಲರು, ಎ&ಇ, ಬೆಂಗಳೂರು;
2. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ(ತಾಂತ್ರಿಕ), ಬಹುಮಹಡಿ ಕಟ್ಟಡ, ಬೆಂಗಳೂರು;
3. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
4. ಆಪ್ತ ಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
5. ಹೆಚ್ಚುವರಿ ಪ್ರತಿ ಕಡತಕ್ಕೆ.

## ಕರ್ನಾಟಕ ಸರ್ಕಾರದ ನಡಾವಳಿಗಳು

**ವಿಷಯ:** ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ ಉಪನ್ಯಾಸಕರು (ಆಯ್ಕೆ ಶ್ರೇಣಿ) ಹುದ್ದೆಗೆ ಸ್ಥಾನೀಕರಣ ಮುಂಬಡ್ತಿ ಮತ್ತು ಎ.ಜಿ.ಪಿ. ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ:-**
1. ಸರ್ಕಾರದ ಆದೇಶ ಸಂಖ್ಯೆ:ಇಡಿ 118 ಡಿಟಿಇ 2010, ದಿನಾಂಕ: 31.03.2011.
2. ಸರ್ಕಾರದ ಆದೇಶ ಸಂಖ್ಯೆ:ಇಡಿ 167 ಡಿಟಿಇ 2017, ದಿನಾಂಕ: 10.11.2020.
3. ಆಯುಕ್ತಾಲಯದ ಏಕ ಕಡತ ಸಂಖ್ಯೆ:DTE-ADMI0EST(10)/2/2024 (E-1287109)

**ಪ್ರಸ್ತಾವನೆ:-**

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ 6ನೇ ಎಐಸಿಟಿಇ ವೇತನ ಶ್ರೇಣಿಗಳನ್ನು ದಿನಾಂಕ:01.04.2011 ರಿಂದ ಅನ್ವಯಿಸುವಂತೆ ವಿಸ್ತರಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (2)ರ ಸರ್ಕಾರದ ಆದೇಶದಲ್ಲಿ ಸರ್ಕಾರಿ/ಖಾಸಗಿ ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿನ ಬೋಧಕ ಸಿಬ್ಬಂದಿಗಳಿಗೆ ಸಿ.ಎ.ಎಸ್ ಯೋಜನೆ ಆಧಾರಿತ ವೃತ್ತಿ ಪದೋನ್ನತಿ (CAS) ಸೌಲಭ್ಯಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. All India Council for Technical Education (Career Advancement scheme for the teachers and other Academic staff in Technical Institutions) (Diploma) Regulations, 2012ರ ದಿನಾಂಕ:08.11.2012ರಲ್ಲಿನ ನಿಯಮಗಳಲ್ಲಿ ವಿಧಿಸಿರುವ ಎ.ಪಿ.ಐ ಆಧಾರಿತ ಅಂಕಗಳ ಪರಿಗಣನೆಯಿಂದ ದಿನಾಂಕ:07.11.2015ರವರೆಗೆ ವಿನಾಯಿತಿ ನೀಡಿ ಕೆಲವು ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ವೃತ್ತಿ ಪದೋನ್ನತಿ (CAS) ಸೌಲಭ್ಯವನ್ನು ಮಂಜೂರು ಮಾಡಲು ಆದೇಶಿಸಲಾಗಿದೆ.

ಮೇಲೆ ಓದಲಾದ (3)ರ ಏಕ ಕಡತದ ಪ್ರಸ್ತಾವನೆಯಲ್ಲಿ, ಸರ್ಕಾರದ ಪತ್ರ ಸಂಖ್ಯೆ:ಇಡಿ 60 ಡಿಟಿಇ 2020 ದಿನಾಂಕ:26.04.2022ರಲ್ಲಿ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಕೆರಿಯರ್ ಅಡ್ವಾನ್‌ಸ್‌ಮೆಂಟ್ ಯೋಜನೆಯಡಿ ಸ್ಥಾನೀಕರಣ ಮುಂಬಡ್ತಿ ಮತ್ತು ಎ.ಜಿ.ಪಿ. ಮಂಜೂರು ಮಾಡುವ ಪ್ರಸ್ತಾವನೆಗಳನ್ನು ಪರಿಶೀಲಿಸಲು ಪ್ರತ್ಯೇಕ ಸ್ಥಾನೀಕರಣ ಸಮಿತಿಯನ್ನು ರಚಿಸುವ ಅಧಿಕಾರವನ್ನು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರಿಗೆ ಪ್ರತ್ಯಾಯೋಜಿಸಲಾಗಿದೆ. ಅದರನ್ವಯ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ವಿಷಯ ತಜ್ಞರುಗಳನ್ನೊಳಗೊಂಡ ಸ್ಥಾನೀಕರಣ ಸಮಿತಿಯು ದಿನಾಂಕ:16.01.2023 ರಿಂದ 25.01.2023ರವರೆಗೆ ಸಭೆ ಸೇರಿ ಮೆಕ್ಯಾನಿಕಲ್ & ಆಟೋಮೊಬೈಲ್ ಇಂಜಿನಿಯರಿಂಗ್ ವಿಭಾಗದ 07 ಉಪನ್ಯಾಸಕರುಗಳು, 2) ಇ&ಸಿ ವಿಭಾಗದ 05 ಉಪನ್ಯಾಸಕರುಗಳು, 3) ಕಂಪ್ಯೂಟರ್ ಸೈನ್ಸ್ ವಿಭಾಗದ 08 ಉಪನ್ಯಾಸಕರುಗಳು, 4) ಸಿವಿಲ್ ವಿಭಾಗದ 01 ಉಪನ್ಯಾಸಕರು, 5) ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗದ 07 ಉಪನ್ಯಾಸಕರುಗಳು, 6) 08 ವಿಜ್ಞಾನ ಉಪನ್ಯಾಸಕರುಗಳು, 7) 01 ಲೈಬ್ರರಿ ಸೈನ್ಸ್ ಮತ್ತು 8) 01 ಇಂಗ್ಲೀಷ್ ಉಪನ್ಯಾಸಕರುಗಳ ಪ್ರಸ್ತಾವನೆಗಳನ್ನೊಳಗೊಂಡಂತೆ ಒಟ್ಟು 38 ಉಪನ್ಯಾಸಕರುಗಳ (ಹಿರಿಯ ಶ್ರೇಣಿ) ಪೈಕಿ ಒಟ್ಟು 29 ಅರ್ಹ ಉಪನ್ಯಾಸಕರುಗಳಿಗೆ 6ನೇ

ಎಐಸಿಟಿಇ ವೇತನ ಶ್ರೇಣಿ ರೂ.15600-39100+ಎಜಿಪಿ ರೂ.7000 ರಿಂದ ವೇತನ ಶ್ರೇಣಿ ರೂ.15600-39100 + ಎಜಿಪಿ ರೂ.8000ರಲ್ಲಿ ಸದರಿಯವರುಗಳು ಮುಂಬಡ್ತಿಗೆ ಅರ್ಹತೆ ಪಡೆದ ದಿನಾಂಕದಿಂದ ಉಪನ್ಯಾಸಕರು (ಆಯ್ಕೆ ಶ್ರೇಣಿ) ಹುದ್ದೆಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ ಸ್ಥಾನೀಕರಣ ಮುಂಬಡ್ತಿ ಮತ್ತು ಎ.ಜಿ.ಪಿ. ಸೌಲಭ್ಯವನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡಿದ್ದು, ಅದರಂತೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆರವರು ಸದರಿ ಉಪನ್ಯಾಸಕರುಗಳಿಗೆ ಮುಂದಿನ ಹಂತದ ಎ.ಜಿ.ಪಿ ಮಂಜೂರು ಮಾಡಲು ಸರ್ಕಾರದ ಆದೇಶವನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ 29 ಜನ ಉಪನ್ಯಾಸಕರುಗಳಿಗೆ (ಹಿರಿಯ ಶ್ರೇಣಿ) ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆ(CAS)ಯಡಿ 6ನೇ ಎಐಸಿಟಿಇ ವೇತನ ಶ್ರೇಣಿ ರೂ.15600-39100+ಎಜಿಪಿ ರೂ.7000 ರಿಂದ ವೇತನ ಶ್ರೇಣಿ ರೂ.15600-39100 + ಎಜಿಪಿ ರೂ.8000 ರಲ್ಲಿ ಉಪನ್ಯಾಸಕರು(ಆಯ್ಕೆ ಶ್ರೇಣಿ) ಹುದ್ದೆಗೆ ವೃತ್ತಿ ಪದೋನ್ನತಿ ನೀಡಲು ಸರ್ಕಾರವು ತೀರ್ಮಾನಿಸಿದ್ದು, ಅದರಂತೆ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 25 ಡಿಟಿಇ 2024**

**ಬೆಂಗಳೂರು, ದಿನಾಂಕ:12ನೇ ಮಾರ್ಚ್ 2024**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಆದೇಶದ **ಅನುಬಂಧ**ದಲ್ಲಿರುವ 29 ಉಪನ್ಯಾಸಕರುಗಳಿಗೆ ಕೆಳಕಂಡ ಷರತ್ತಿಗೊಳಪಟ್ಟು ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆ(CAS)ಯಡಿ 6ನೇ ಎಐಸಿಟಿಇ ವೇತನ ಶ್ರೇಣಿ ರೂ.15600-39100+ಎಜಿಪಿ ರೂ.7000 ರಿಂದ ವೇತನ ಶ್ರೇಣಿ ರೂ.15600-39100 + ಎಜಿಪಿ ರೂ.8000 ರಲ್ಲಿ ಉಪನ್ಯಾಸಕರು (ಆಯ್ಕೆ ಶ್ರೇಣಿ) ಹುದ್ದೆಗೆ ವೃತ್ತಿ ಪದೋನ್ನತಿ ನೀಡಿ ಆದೇಶಿಸಿದೆ.

**ಷರತ್ತುಗಳು**:

i. 2010 ಮತ್ತು 2012ರ ಎಐಸಿಟಿಇ ರೆಗ್ಯುಲೇಷನ್‌ಗಳನ್ವಯ ಎ.ಜಿ.ಪಿ ಮಂಜೂರಾತಿಯು ಸರ್ಕಾರದ ಮಾರ್ಗಸೂಚಿ/ ಆದೇಶಗಳಲ್ಲಿನ ನಿಬಂಧನೆಗೊಳಪಟ್ಟಿರುತ್ತದೆ.

ii. ಎ.ಜಿ.ಪಿ ಮಂಜೂರಾತಿಯು ಎಐಸಿಟಿಇ/ಯುಜಿಸಿ/ಸರ್ಕಾರ/ಇಲಾಖೆ ಕಾಲಕಾಲಕ್ಕೆ ಹೊರಡಿಸಿರುವ ಆದೇಶ/ ಸುತ್ತೋಲೆ/ ಪತ್ರಗಳಲ್ಲಿ ನಿಗದಿಪಡಿಸಿರುವ ಷರತ್ತು/ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

iii. ಸದರಿ ಬೋಧಕ ಸಿಬ್ಬಂದಿಗಳು ಸಿಎಎಸ್ ಮುಂಬಡ್ತಿಗೆ ಎಲ್ಲಾ ರೀತಿಯಲ್ಲೂ ಅರ್ಹತೆಯನ್ನು ಹೊಂದಿರುವ ಬಗ್ಗೆ, ಸ್ಥಾನೀಕರಣ ಆಯ್ಕೆ ಸಮಿತಿಯು ಮಾಡಿರುವ ಶಿಫಾರಸ್ಸಿನಂತೆ ಪರಿಗಣಿಸಲಾಗಿದೆ.

iv. ಸದರಿಯವರು ಸಿಎಎಸ್‌ರಡಿ ಪದೋನ್ನತಿಗೆ ಅರ್ಹತೆ ಹೊಂದಿದ ದಿನಾಂಕದಿಂದ ಸೇವಾ ಜೇಷ್ಠತೆಯನ್ನು ಪರಿಗಣಿಸುವುದು ಹಾಗೂ ಸದರಿ ಪದೋನ್ನತಿಯ ಆರ್ಥಿಕ ಸೌಲಭ್ಯವನ್ನು ಭವಿಷ್ಯವರ್ತಿಯಾಗಿ ಈ ಆದೇಶವನ್ನು ಹೊರಡಿಸಿದ ದಿನಾಂಕ:12.03.2024 ರಿಂದ ಜಾರಿಗೊಳಿಸುವುದು.

v. ಸದರಿಯವರುಗಳಿಗೆ ವೇತನ ಶ್ರೇಣಿಯನ್ನು 7ನೇ ಎಐಸಿಟಿಇ ಪರಿಷ್ಕೃತ ವೇತನ ಶ್ರೇಣಿಯಡಿ ಸಂವಾದಿಯಾಗಿ ನಿಗಧಿಪಡಿಸಲು ಅಗತ್ಯ ಕ್ರಮವಹಿಸುವುದು.

vi. ಸದರಿ ಬೋಧಕ ಸಿಬ್ಬಂದಿಗಳ ಪ್ರಸ್ತಾವನೆಯಲ್ಲಿ ಯಾವುದೇ ತಪ್ಪು ಮಾಹಿತಿಯನ್ನು ಒದಗಿಸಿರುವುದು ಕಂಡು ಬಂದಲ್ಲಿ ಸದರಿಯವರುಗಳ ಎ.ಜಿ.ಪಿ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆ ನೀಡದೇ ಹಿಂಪಡೆಯಲಾಗುವುದು ಹಾಗೂ ತಪ್ಪು ಮಾಹಿತಿ ಒದಗಿಸಿದವರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

vii. ಈ ಆದೇಶದನ್ವಯ ಮಂಜೂರು ಮಾಡಲಾಗುವ ಎ.ಜಿ.ಪಿ. ಸೌಲಭ್ಯವನ್ನು ಸ್ಥಳೀಯ/ ಮಹಾಲೇಖಪಾಲರ ಲೆಕ್ಕಪರಿಶೋಧನೆಗೆ ಒಳಪಡಿಸಿದಾಗ ಯಾವುದೇ ಅಸಂಗತಗಳು ಕಂಡುಬಂದಲ್ಲಿ ಮರು ಪರಿಶೀಲಿಸುವ ಮತ್ತು ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

viii. ಎಜಿಪಿ ಮಂಜೂರಾತಿ ವಿವರಗಳನ್ನು ಸದರಿ ಬೋಧಕ ಸಿಬ್ಬಂದಿಗಳ ಸೇವಾ ಪುಸ್ತಕದಲ್ಲಿ ನಮೂದಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ:FD 51 Exp-8/2023, ದಿನಾಂಕ:03.03.2023ರಲ್ಲಿ ನೀಡಿರುವ ಅಭಿಪ್ರಾಯದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

12/3/2024

(ಮಹಾಂತಪ್ಪ ಎಸ್.ತುರಕನೂರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ತಾಂತ್ರಿಕ ಶಿಕ್ಷಣ)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಸಂಬಂಧಪಟ್ಟ ಉಪನ್ಯಾಸಕರುಗಳಿಗೆ (ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆರವರ ಕಛೇರಿಯ ಮೂಲಕ)

**ಪ್ರತಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ
2. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ
3. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

## ಅನುಬಂಧ

**(ಸರ್ಕಾರದ ಆದೇಶ ಸಂಖ್ಯೆ:ಇಡಿ 25 ಡಿಟಿಇ 2024, ದಿನಾಂಕ:12.03.2024)**

| ಕ್ರ. ಸಂ | ಹೆಸರು, ಪದನಾಮ ಮತ್ತು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ | ಸೇವೆಗೆ ಸೇರಿದ ದಿನಾಂಕ | ಎಜಿಪಿ ರೂ.7000/- ಮಂಜೂರಾದ ದಿನಾಂಕ | ವಿದ್ಯಾರ್ಹತೆ ಎಂ.ಟೆಕ್/ ಎಂ.ಫಿಲ್ ಮತ್ತು ಪಿ.ಹೆಚ್‌ಡಿ ಪಡೆದ ದಿನಾಂಕ | (ಎ.ಜಿ.ಪಿ 7000 ರಿಂದ 8000) ಪದೋನ್ನತಿಗೆ ಅರ್ಹತಾ ದಿನಾಂಕ |
|---|---|---|---|---|---|
| | **ಮೆಕ್ಯಾನಿಕಲ್ ವಿಭಾಗ** | | | | |
| 1. | ಡಾ. ಮಧು ಬಿ.ವಿ.<br>ಹಿರಿಯ ಶ್ರೇಣಿ ಉಪನ್ಯಾಸಕರು,<br>ಮೆಕ್ಯಾನಿಕಲ್ ಇಂಜಿನಿಯರಿಂಗ್,<br>ಶ್ರೀಮತಿ. ಎಲ್.ವಿ. ಪಾಲಿಟೆಕ್ನಿಕ್, ಹಾಸನ. | 27.01.2010 | 27.01.2015 | ಎಂ. ಟೆಕ್ | 27.01.2019 |
| | **ಇ & ಸಿ ವಿಭಾಗ** | | | | |
| 2. | ಜ್ಯೋತಿ ,<br>ಹಿರಿಯ ಶ್ರೇಣಿ ಉಪನ್ಯಾಸಕರು,<br>ಇ & ಸಿ ವಿಭಾಗ,<br>ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್,<br>ಬೆಂಗಳೂರು. | 19.06.2008 | 19.06.2013 | ಎಂ.ಟೆಕ್<br>19.11.2009 | 19.06.2018 |
| 3. | ಶ್ಯಾಮಲ<br>ಹಿರಿಯ ಶ್ರೇಣಿ ಉಪನ್ಯಾಸಕರು,<br>ಇ & ಸಿ ವಿಭಾಗ,<br>ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್,<br>ರಾಮನಗರ. | 08.02.2008 | 08.02.2013 | ಎಂ.ಟೆಕ್<br>29.12.2007 | 08.02.2018 |
| 4. | ಮೀನಾ ಎಂ.<br>ಹಿರಿಯ ಶ್ರೇಣಿ ಉಪನ್ಯಾಸಕರು,<br>ಇ & ಸಿ ವಿಭಾಗ,<br>ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ. | 11.02.2008 | 11.02.2013 | ಎಂ.ಟೆಕ್<br>27.04.2006 | 11.02.2018 |
| | **ಕಂಪ್ಯೂಟರ್ ಸೈನ್ಸ್** | | | | |
| 5. | ಅನಿಲ್ ಕುಮಾರ್. ಕೆ<br>ಹಿರಿಯ ಶ್ರೇಣಿ ಉಪನ್ಯಾಸಕರು,<br>ಕಂಪ್ಯೂಟರ್ ಸೈನ್ಸ್ ,<br>ಸರ್ಕಾರಿ ಪಾಲಿಟೆಕ್ನಿಕ್, ಬಾಗೇಪಲ್ಲಿ. | 18.02.2008 | 18.02.2013 | ಎಂ.ಟೆಕ್, | 18-02-2018 |
| 6. | ಶಿವಾನಂದ<br>ಹಿರಿಯ ಶ್ರೇಣಿ ಉಪನ್ಯಾಸಕರು,<br>ಕಂಪ್ಯೂಟರ್ ಸೈನ್ಸ್ ,<br>ಸರ್ಕಾರಿ ಪಾಲಿಟೆಕ್ನಿಕ್, ಕಾರಟಗಿ. | 13.02.2008 | 13.02.2013 | ಎಂ.ಟೆಕ್, | 13-02-2018 |
| 7. | ವಿಜಯಕುಮಾರ್ ವಲ್ಲೂರೆ<br>ಹಿರಿಯ ಶ್ರೇಣಿ ಉಪನ್ಯಾಸಕರು,<br>ಕಂಪ್ಯೂಟರ್ ಸೈನ್ಸ್,<br>ಸರ್ಕಾರಿ ಪಾಲಿಟೆಕ್ನಿಕ್, ಔರಾದ(ಬಾ). | 14.02.2008 | 14.02.2013 | ಎಂ.ಟೆಕ್, | 14-02-2018 |

| | | | | | |
|---|---|---|---|---|---|
| 8. | ಅನುಪಮಾ ಆರ್. ತಂಬ್ರಾಲಿಮಠ<br>ಹಿರಿಯ ಶ್ರೇಣಿ ಉಪನ್ಯಾಸಕರು,<br>ಕಂಪ್ಯೂಟರ್ ಸೈನ್ಸ್,<br>ಸರ್ಕಾರಿ ಪಾಲಿಟೆಕ್ನಿಕ್, ಗದಗ. | 12.02.2008 | 12.02.2013 | ಎಂ.ಟೆಕ್ | 12-02-2018 |
| 9. | ಆಶಾಲತಾ ಪಿ.ಆರ್.,<br>ಹಿರಿಯ ಶ್ರೇಣಿ ಉಪನ್ಯಾಸಕರು,<br>ಕಂಪ್ಯೂಟರ್ ಸೈನ್ಸ್,<br>ಸರ್ಕಾರಿ ಪಾಲಿಟೆಕ್ನಿಕ್, ಕೆ.ಆರ್.ಪೇಟೆ. | 08.02.2008 | 08.02.2013 | ಎಂ.ಟೆಕ್<br>08.04.2012 | 08-02-2018 |
| 10. | ಮಂಜುನಾಥ ಕೆ.ಎಂ.<br>ಹಿರಿಯ ಶ್ರೇಣಿ ಉಪನ್ಯಾಸಕರು,<br>ಕಂಪ್ಯೂಟರ್ ಸೈನ್ಸ್,<br>ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು. | 14.02.2008 | 14.02.2013 | ಎಂ.ಟೆಕ್ | 14-02-2018 |
| 11. | ಶಬಾನಾ ನಾಜ್<br>ಹಿರಿಯ ಶ್ರೇಣಿ ಉಪನ್ಯಾಸಕರು,<br>ಕಂಪ್ಯೂಟರ್ ಸೈನ್ಸ್<br>ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್,<br>ಕಲಬುರಗಿ. | 11.02.2008 | 11.02.2013 | ಎಂ.ಟೆಕ್, | 11-02-2018 |
| 12. | ಸುಜಾತಾ ಎಸ್ ರತ್ನಾಕರ್<br>ಹಿರಿಯ ಶ್ರೇಣಿ ಉಪನ್ಯಾಸಕರು,<br>ಕಂಪ್ಯೂಟರ್ ಸೈನ್ಸ್,<br>ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್,<br>ರಾಮನಗರ. | 08.02.2008 | 08.02.2013 | ಎಂ.ಟೆಕ್, | 08-02-2018 |
| **ಸಿವಿಲ್ ವಿಭಾಗ** | | | | | |
| 13. | ಶ್ರುತಿ ಕೆ.ವಿ.<br>ಹಿ.ಶ್ರೇ.ಉಪನ್ಯಾಸಕರು,<br>ಸಿವಿಲ್ ವಿಭಾಗ,<br>ಸರ್ಕಾರಿ ಎಸ್.ಜೆ. ಪಾಲಿಟೆಕ್ನಿಕ್<br>ಬೆಂಗಳೂರು. | 20.12.2007 | 20.12.2012 | ಎಂ.ಟೆಕ್ | 20.12.2017 |
| **ವಿಜ್ಞಾನ ಮತ್ತು ಮಾನವ ಶಾಸ್ತ್ರ ವಿಭಾಗ** | | | | | |
| 14. | ರಶ್ಮಿ ಎಸ್.<br>ಹಿ.ಶ್ರೇ.ಉಪನ್ಯಾಸಕರು,<br>ವಿಜ್ಞಾನ ವಿಭಾಗ,<br>ಸರ್ಕಾರಿ ಸಿ.ಪಿ.ಸಿ ಪಾಲಿಟೆಕ್ನಿಕ್,<br>ಮೈಸೂರು. | 26.10.2007 | 26.10.2012 | ಎಂ.ಫಿಲ್ | 26.10.2017 |
| 15. | ಡಾ. ಸಂತೋಷ್<br>ಹಿ.ಶ್ರೇ.ಉಪನ್ಯಾಸಕರು,<br>ವಿಜ್ಞಾನ ವಿಭಾಗ,<br>ಸರ್ಕಾರಿ ಪಾಲಿಟೆಕ್ನಿಕ್, ಬೀದರ್. | 22.01.2010 | 22.02.2014 | ಪಿ.ಹೆಚ್.ಡಿ<br>06.03.2013 | 22.02.2019 |
| 16. | ಡಾ. ಅನಿಲ್ ಆರ್.<br>ಹಿ.ಶ್ರೇ.ಉಪನ್ಯಾಸಕರು,<br>ವಿಜ್ಞಾನ ವಿಭಾಗ,<br>ಸರ್ಕಾರಿ ಪಾಲಿಟೆಕ್ನಿಕ್, ಅಫಜಲಪುರ. | 16.01.2010 | 16.01.2014 | ಪಿ.ಹೆಚ್.ಡಿ<br>20.02.2014 | 16.01.2019 |

| | | | | | |
|---|---|---|---|---|---|
| 17. | ಡಾ. ರಾಜಶೇಖರ್ ಎಸ್. ಹೀರಾ<br>ಹಿ.ಶ್ರೇ.ಉಪನ್ಯಾಸಕರು,<br>ವಿಜ್ಞಾನ ವಿಭಾಗ,<br>ಸರ್ಕಾರಿ ಪಾಲಿಟೆಕ್ನಿಕ್, ಕಲಬುರ್ಗಿ. | 27.10.2007 | 27.10.2011 | ಪಿ.ಹೆಚ್.ಡಿ<br>17.02.2011 | 27.10.2016 |
| 18. | ಡಾ. ಭವ್ಯ ಬಿ.ಎಸ್.<br>ಹಿ.ಶ್ರೇ.ಉಪನ್ಯಾಸಕರು,<br>ವಿಜ್ಞಾನ ವಿಭಾಗ,<br>ಸರ್ಕಾರಿ ಎಸ್.ಜೆ ಪಾಲಿಟೆಕ್ನಿಕ್,<br>ಬೆಂಗಳೂರು. | 25.01.2010 | 25.01.2014 | ಪಿ.ಹೆಚ್.ಡಿ<br>20.05.2014 | 25.01.2019 |
| 19. | ಡಾ. ಸಪ್ನಾ<br>ಹಿ.ಶ್ರೇ.ಉಪನ್ಯಾಸಕರು,<br>ವಿಜ್ಞಾನ ವಿಭಾಗ,<br>ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್,<br>ಕಲಬುರಗಿ. | 16.01.2010 | 16.01.2014 | ಪಿ.ಹೆಚ್.ಡಿ<br>20.02.2014 | 16.01.2019 |
| 20. | ಸವಿತ ಎಸ್. ಶಿಂಧೆ<br>ಹಿ.ಶ್ರೇ.ಉಪನ್ಯಾಸಕರು,<br>ವಿಜ್ಞಾನ ವಿಭಾಗ,<br>ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ. | 07.11.2007 | 07.11.2012 | ಎಂ.ಫಿಲ್ | 07.11.2017 |
| 21. | ಡಾ ಬಂತೇಶ ಕೆ ಬಮ್ಮಣ್ಣವರ<br>ಹಿ.ಶ್ರೇ.ಉಪನ್ಯಾಸಕರು,<br>ವಿಜ್ಞಾನ ವಿಭಾಗ,<br>ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ. | 19.01.2010 | 14.06.2014 | ಪಿ.ಹೆಚ್.ಡಿ | 19.01.2019 |
| | **ಲೈಬ್ರರಿ ಸೈನ್ಸ್ ವಿಭಾಗ** | | | | |
| 22. | ಡಾ.ಮಹದೇವ ಪ್ರಸಾದ್ ಎಂ.ಎಸ್<br>ಹಿ.ಶ್ರೇ.ಉಪನ್ಯಾಸಕರು,<br>ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್,<br>ಬೆಂಗಳೂರು. | 26.10.2007 | 26.10.2012 | ಪಿ.ಹೆಚ್.ಡಿ | 26.10.2017 |
| | **ಕಮರ್ಷಿಯಲ್ ಪ್ರಾಕ್ಟೀಸ್ (ಸಿ.ಪಿ)** | | | | |
| 23. | ನಂದಾದೇವಿ<br>ಉಪನ್ಯಾಸಕರು,<br>ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗ,<br>ಎಸ್ ಆರ್ ಸಿ ಬಿ ಎಂ ಪಾಲಿಟೆಕ್ನಿಕ್,<br>ಬೆಂಗಳೂರು. | 17.03.2007 | 21.08.2015 | ಎಂ.ಕಾಂ | 21.08.2018 |
| 24. | ವೆಂಕಟೇಶ್ ಎಂ.<br>ಹಿ.ಶ್ರೇ.ಉಪನ್ಯಾಸಕರು,<br>ಕಮರ್ಷಿಯಲ್ ಪ್ರಾಕ್ಟೀಸ್,<br>ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್,<br>ಬೆಂಗಳೂರು. | 21.10.2007 | 29.10.2013 | ಎಂ.ಫಿಲ್ | 29.10.2017 |
| 25. | ಫಾತಿಮುನ್ನೀಸಾ<br>ಉಪನ್ಯಾಸಕರು,<br>ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗ,<br>ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ. | 29.10.2007 | - | ಎಂ.ಕಾಂ | 02.03.2018 |

| | | | | | |
|---|---|---|---|---|---|
| 26. | ಶೃತಿ. ಡಿ.ಬಿ.<br>ಉಪನ್ಯಾಸಕರು,<br>ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗ,<br>ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್,<br>ರಾಮನಗರ. | 02.11.2007 | - | ಎಂ.ಫಿಲ್ | 02.11.2017 |
| 27. | ಸಂಜೀವ ಎಸ್.ಕಲಾಲ.<br>ಉಪನ್ಯಾಸಕರು,<br>ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗ,<br>ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ. | 05.11.2007 | - | ಎಂ.ಕಾಂ.,<br>ಎಂ.ಫಿಲ್ | 05.11.2017 |
| 28. | ಮಂಜುಳಾ.ಕೆ<br>ಉಪನ್ಯಾಸಕರು<br>ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗ,<br>ಸರ್ಕಾರಿ ಡಿ ಆರ್.ಆರ್ ಪಾಲಿಟೆಕ್ನಿಕ್,<br>ದಾವಣಗೆರೆ. | 26.10.2007 | - | ಎಂ.ಫಿಲ್ | 26.10.2017 |
| 29. | ಸಮೀವುಲ್ಲಾ ಖಾನ್,<br>ಉಪನ್ಯಾಸಕರು,<br>ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗ,<br>ಸರ್ಕಾರಿ ಜಿ.ಆರ್.ಐ.ಸಿ ಪಾಲಿಟೆಕ್ನಿಕ್,<br>ಬೆಂಗಳೂರು. | 25.10.2007 | - | ಎಂ.ಫಿಲ್ | 25.10.2017 |

12/3/2024

(ಮಹಾಂತಪ್ಪ ಎಸ್.ತುರಕನೂರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ತಾಂತ್ರಿಕ ಶಿಕ್ಷಣ)